# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 527

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ

ಉತ್ತರಿಸಬೇಕಾದ ದಿನಾಂಕ : 13.12.2018

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯಿಂದ ಹಮ್ಮಿಕೊಂಡಿರುವ ವಿವಿಧ ಯೋಜನೆಗಳಾವುವು; ಈ ಯೋಜನೆಗಳಿಗೆ ಮಂಜೂರಾದ ಅನುದಾನವೆಷ್ಟು; ಬಿಡುಗಡೆಯಾದ ಹಾಗೂ ಬಾಕಿ ಉಳಿದ ಅನುದಾನವೆಷ್ಟು; (ಯೋಜನಾವಾರು, ತಾಲ್ಲೂಕುವಾರು ವಿವರ ನೀಡುವುದು) | ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸದರಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು; ಅವುಗಳ ರೂಪುರೇಷೆಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ:ಮಮಇ:138:ಸ್ತ್ರೀಮರ:2018

(ಡಾ|| ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:527ಕ್ಕೆ ಅನುಬಂಧ-1 . ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

2016-17ನೇ ಸಾಲಿನ ಅನುದಾನದ ವಿವರ ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಸಾಂತ್ವನ | | | ಸ್ತ್ರೀಶಕ್ತಿ ಯೋಜನೆ | | | "ಗೆಳತಿ" ಜಿಲ್ಲಾ ಹಾಗೂ ತಾಲ್ಲೂಕು ವಿಶೇಷ ಚಿಕಿತ್ಸಾ ಘಟಕ | | | ಕೌಟುಂಬಿಕ ಹಿಂಸೆಯಿಂದ ಮಹಿಳಾ ಸಂರಕ್ಷಣಾ ಕಾಯ್ದೆ-2005 | | | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | | | ಬಾಲಕಿಯರ ವಸತಿ ನಿಲಯ | | | ಸ್ವಾಧಾರ ಗೃಹ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 |
| 1 | ಉ.ನಿ ಕಚೇರಿ | - | - | - | - | - | - | 6.98 | 5.84 | 1.14 | 1.54 | 1.10 | 0.44 | - | - | - | - | - | - | - | - | - |
| 2 | ಬೀದರ | 5.08 | 5.08 | - | 27.55 | 27.55 | - | - | - | - | 1.34 | 1.04 | 0.30 | - | - | - | 6.50 | 6.50 | - | 48.86 | 48.86 | |
| 3 | ಭಾಲ್ಕಿ | 4.85 | 4.85 | - | 37.29 | 37.29 | - | - | - | - | 1.34 | 1.04 | 0.30 | - | - | - | 6.50 | 6.50 | - | - | - | |
| 4 | ಬಸವಕಲ್ಯಾಣ | 4.85 | 3.85 | 1.00 | 34.55 | 34.55 | - | - | - | - | 1.34 | 1.04 | 0.30 | - | - | - | 6.50 | 6.50 | - | - | - | |
| 5 | ಹುಮನಾಬಾದ | 4.85 | 4.85 | - | 35.49 | 35.49 | - | - | - | - | 1.34 | 1.04 | 0.30 | - | - | - | 6.50 | 6.50 | - | - | - | |
| 6 | ಸಂತಪೂರ(ಔ) | 4.85 | 4.85 | - | 35.5 | 35.5 | - | - | - | - | 1.34 | 1.04 | 0.30 | - | - | - | 6.50 | 6.50 | - | - | - | |

## 2016-17ನೇ ಸಾಲಿನ ಅನುದಾನದ ವಿವರ

ರೂ.ಲಕ್ಷಗಳಲ್ಲಿ

| ಪೂರಕ ಪೌಷ್ಠಿಕ ಆಹಾರ ಶಾಲಾಪೂರ್ವ ಮಕ್ಕಳಿಗೆ ಊಟದ ಯೋಜನೆ | | | ಬಾಲ್ಯ ವಿವಾಹ ತಡೆಗಟ್ಟುವ ಯೋಜನೆ | | | ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆ | | | ನಿರ್ಗತಿಕ ಮಕ್ಕಳ ಪಾಲನೆ ಮತ್ತು ಪೋಷಣೆ | | | ಅಂಗನವಾಡಿ ಕಟ್ಟಡಗಳ ನಿರ್ಮಾಣ | | | ಅಂಗನವಾಡಿ ಕಟ್ಟಡಗಳ ನಿರ್ವಹಣೆ | | | ಬಾಲ್ಯ ಸ್ನೇಹಿ ಕಟ್ಟಡಗಳಾಗಿ ಪರಿವರ್ತಿಸುವುದು (ಪೆಂಟಿಂಗ್ | | | ಭಾಗ್ಯಲಕ್ಷ್ಮಿ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ |
| 24 | 25 | 26 | 27 | 28 | 29 | 30 | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 |
| - | - | - | - | - | - | - | - | - | - | - | - | - | - | - | - | - | - | - | - | - | - | - | - |
| 1270.78 | 1264.12 | - | 0.404 | 0.404 | - | 0.18 | 0.18 | - | 5.18 | 5.18 | - | 6.00 | 3.60 | - | 11.89 | 11.89 | ಐ.ಪಿ. ಕ್ರಿಯಾ ಯೋಜನೆಯಂತೆ ಸದರಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲಾಗಿದೆ. | 5.90 | 5.90 | - | 325.90 | 325.90 | 0.00 |
| 921.72 | 916.88 | - | 0.242 | 0.242 | - | 0.18 | 0.18 | - | 5.18 | 5.18 | - | 6.00 | 4.27 | - | 11.50 | 11.50 | | 6.00 | 6.00 | - | 249.43 | 249.43 | 0.00 |
| 1118.07 | 1112.20 | - | 0.296 | 0.296 | - | - | - | - | 5.18 | 5.18 | - | 6.00 | 3.60 | - | 11.01 | 11.01 | | 6.00 | 6.00 | - | 251.25 | 251.25 | 0.00 |
| 886.27 | 881.67 | - | 0.243 | 0.243 | - | - | - | - | 5.18 | 5.18 | - | 6.00 | 3.60 | - | 12.00 | 12.00 | | 5.90 | 5.90 | - | 221.96 | 221.96 | 0.00 |
| 957.16 | 952.15 | - | 0.228 | 0.228 | - | - | - | - | 5.18 | 5.18 | - | 6.00 | 3.60 | - | 12.00 | 12.00 | | 5.90 | 5.90 | - | 190.16 | 190.16 | 0.00 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:527ಕ್ಕೆ ಅನುಬಂಧ-1 . ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

**2017-18ನೇ ಸಾಲಿನ ಅನುದಾನದ ವಿವರ**

| ಕ್ರ. ಸಂ | ತಾಲ್ಲೂಕಿನ ಹೆಸರು | ಸಾಂತ್ವನ | | | ಸ್ತ್ರೀಶಕ್ತಿ ಯೋಜನೆ | | | "ಗೆಳತಿ" ಜಿಲ್ಲಾ ಹಾಗೂ ತಾಲ್ಲೂಕು ವಿಶೇಷ ಚಿಕಿತ್ಸಾ ಘಟಕ | | | ಕೌಟುಂಬಿಕ ಹಿಂಸೆಯಿಂದ ಮಹಿಳಾ ಸಂರಕ್ಷಣಾ ಕಾಯ್ದೆ-2005 | | | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | | | ಬಾಲಕಿಯರ ವಸತಿ ನಿಲಯ | | | ಸ್ವಾಧಾರ ಗೃಹ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 |
| 1 | ಬೀದರ ಉ.ನಿ ಕಚೇರಿ | - | - | - | - | - | - | 11.77 | 11.77 | 1.55 | 1.26 | 1.26 | 0.12 | - | - | - | - | - | - | - | - | - |
| 2 | ಬೀದರ | 4.10 | 4.10 | - | 29.02 | 29.02 | - | - | - | - | 1.26 | 1.26 | 0.09 | | | | 4.05 | 4.05 | - | 28.75 | 28.75 | - |
| 3 | ಭಾಲ್ಕಿ | 4.10 | 4.10 | - | 30.62 | 30.62 | 0.02 | - | - | - | 1.26 | 1.26 | - | - | - | - | 10.23 | 10.23 | - | - | - | - |
| 4 | ಬಸವಕಲ್ಯಾಣ | 4.10 | 4.10 | - | 35.08 | 35.08 | 0.12 | - | - | - | 1.26 | 1.26 | - | - | - | - | - | - | - | - | - | - |
| 5 | ಹುಮನಾಬಾದ | 4.10 | 4.10 | - | 33.19 | 33.19 | 0.1 | - | - | - | 1.26 | 1.26 | - | - | - | - | - | - | - | - | - | - |
| 6 | ಸಂತಪೂರ(ಔ) | 4.10 | 4.10 | - | 34.33 | 34.33 | - | - | - | - | 1.26 | 1.26 | - | - | - | - | 10.23 | 10.23 | - | - | | - |
| | ಒಟ್ಟು | 20.50 | 20.50 | | 162.24 | 162.24 | 0.2 | 11.77 | 11.77 | 1.55 | 7.56 | 7.56 | 0.21 | - | - | - | 24.51 | 24.51 | - | 28.75 | 28.75 | |

| | ರೂ.ಲಕ್ಷಗಳಲ್ಲಿ | | 2017-18ನೇ ಸಾಲಿನ ಅನುದಾನದ ವಿವರ | | | | | | | | | | | | | | | | | | ರೂ.ಲಕ್ಷಗಳಲ್ಲಿ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಪೂರಕ ಪೌಷ್ಠಿಕ ಆಹಾರ ಶಾಲಾಪೂರ್ವ ಮಕ್ಕಳಿಗೆ ಊಟದ ಯೋಜನೆ | | | ಬಾಲ್ಯ ವಿವಾಹ ತಡೆಗಟ್ಟುವ ಯೋಜನೆ | | | ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣೆ ಯೋಜನೆ | | | ನಿರ್ಗತಿಕ ಮಕ್ಕಳ ಪಾಲನೆ ಮತ್ತು ಪೋಷಣೆ | | | ಅಂಗನವಾಡಿ ಕಟ್ಟಡಗಳ ನಿರ್ಮಾಣ | | | ಅಂಗನವಾಡಿ ಕಟ್ಟಡಗಳ ನಿರ್ವಹಣೆ | | | ಬಾಲ್ಯ ಸ್ನೇಹಿ ಕಟ್ಟಡಗಳಾಗಿ ಪರಿವರ್ತಿಸುವುದು (ಪೆಂಟಿಂಗ್) | | | ಭಾಗ್ಯಲಕ್ಷ್ಮಿ | | |
| ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ | ಮಂಜೂರಾದ ಅನುದಾನ | ಬಿಡುಗಡೆ | ಬಾಕಿ |
| 24 | 25 | 26 | 27 | 28 | 29 | 30 | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 |
| - | - | - | | | | | | | - | - | - | - | - | - | - | - | - | - | - | - | - | - | - |
| 1836.48 | 1277.93 | - | 2017-18ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ. | | | 2017-18ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ. | | | 5.18 | 5.18 | - | 60.00 | 60.00 | - | 12.00 | 12.00 | ಜಿ.ಪಿ ಕ್ರಿಯಾಯೋಜನೆಯಂತೆ ನವರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. | 3.00 | 3.00 | - | 208.37 | 208.37 | 0.00 |
| 1551.38 | 1661.29 | - | | | | | | | 5.18 | 5.18 | - | 89.74 | 89.74 | - | 12.00 | 12.00 | | 3.00 | 3.00 | - | 164.76 | 164.76 | 0.00 |
| 1715.07 | 1795.91 | - | | | | | | | 5.18 | 5.18 | - | 110.91 | 110.91 | - | 12.00 | 11.64 | | 3.00 | 3.00 | - | 97.03 | 97.03 | 0.00 |
| 1400.10 | 978.12 | - | | | | | | | 5.18 | 5.18 | - | 124.80 | 124.80 | - | 12.00 | 11.90 | | 3.00 | 3.00 | - | 71.49 | 71.49 | 0.00 |
| 1392.74 | 1048.85 | - | | | | | | | 5.18 | 5.18 | - | 82.20 | 82.20 | - | 12.00 | 11.96 | | 3.00 | 3.00 | - | 86.66 | 86.66 | 0.00 |
| 7895.77 | 6762.10 | | | | | | | | 25.88 | 25.88 | | 467.65 | 467.65 | - | 60.00 | 59.50 | | 15.00 | 15.00 | - | 628.31 | 628.31 | 0.00 |

## ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

| ಕ್ರ.ಸಂ. | ಯೋಜನೆ ಹೆಸರು | ಕ್ಷೇತ್ರವಾರು ಹೆಸರು | 2016-17 | | | | 2017-18 | | | |
|---|---|---|---|---|---|---|---|---|---|---|
| | | | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ |
| 1 | ಆಧಾರ ಯೋಜನೆ (2235-02-101-0-05) | ಬೀದರ | | 5.6 | 16 | | | 5.25 | 15 | |
| | | ಹುಮನಾಬಾದ | | 0.7 | 2 | | | 1.75 | 5 | |
| | | ಬಸವಕಲ್ಯಾಣ | | 1.4 | 4 | | | 1.4 | 4 | |
| | | ಔರಾದ | | 1.75 | 5 | | | 2.1 | 6 | |
| | | ಭಾಲ್ಕಿ | 10.5 | 1.05 | 3 | 0 | 10.5 | 0 | 0 | 0 |
| | ಒಟ್ಟು:- | | 10.5 | 10.5 | 30 | 0 | 10.5 | 10.5 | 30 | 0 |
| 2 | ಸಾಧನೆ ಸಲಕರಣೆ (2235-02-101-0-52) | ಬೀದರ | | 0.49 | 22 | | | 0.9 | 21 | |
| | | ಹುಮನಾಬಾದ | | 0.49 | 22 | | | 0.65 | 17 | |
| | | ಬಸವಕಲ್ಯಾಣ | | 0.49 | 22 | | | 0.65 | 17 | |
| | | ಔರಾದ | | 0.49 | 22 | | | 0.65 | 17 | |
| | | ಭಾಲ್ಕಿ | 2.5 | 0.49 | 22 | 0 | 3.5 | 0.65 | 17 | 0 |
| | ಒಟ್ಟು:- | | 2.5 | 2.5 | 110 | 0 | 3.5 | 3.5 | 89 | 0 |
| 3 | ವಿಕಲಚೇತನರ ಶಿಷ್ಯವೇತನ (2235-02-101-0-05) | ಬೀದರ | | 2.2 | 61 | | | 1.97 | 61 | |
| | | ಹುಮನಾಬಾದ | | 0.91 | 31 | | | 1.1 | 23 | |
| | | ಬಸವಕಲ್ಯಾಣ | | 0.61 | 15 | | | 0.93 | 25 | |
| | | ಔರಾದ | | 1.22 | 21 | | | 0.99 | 21 | |
| | | ಭಾಲ್ಕಿ | 6.63 | 0.55 | 11 | 1.14 | 7.35 | 1.17 | 24 | |
| | ಒಟ್ಟು:- | | 6.63 | 5.49 | 143 | 1.14 | 7.35 | 6.16 | 154 | 1.19 |
| ಕ್ರ.ಸಂ. | ಯೋಜನೆ ಹೆಸರು | ಕ್ಷೇತ್ರವಾರು ಹೆಸರು | 2016-17 | | | | 2017-18 | | | |
| | | | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ |
| 4 | ವಿವಾಹ ಪ್ರೋತ್ಸಾಹ ಧನ (2235-02-101-0-99) | ಬೀದರ | | 7.5 | 15 | | | 6 | 12 | |
| | | ಹುಮನಾಬಾದ | | 3 | 6 | | | 2 | 4 | |
| | | ಬಸವಕಲ್ಯಾಣ | | 2 | 4 | | | 1 | 2 | |
| | | ಔರಾದ | | 2 | 4 | | | 2.5 | 5 | |
| | | ಭಾಲ್ಕಿ | 17.5 | 1.5 | 3 | 1.5 | 15 | 2 | 4 | 1.5 |
| | ಒಟ್ಟು:- | | 17.5 | 18 | 22 | 1.5 | 15 | 13.5 | 27 | 1.5 |
| 5 | ಶುಲ್ಕ ಮರುಪಾವತಿ (2235-02-101-0-99) | ಬೀದರ | | 1.42 | 26 | | 4.78 | 1.51 | 26 | 0.99 |
| | | ಹುಮನಾಬಾದ | | 0.82 | 11 | | | 0.71 | 11 | |
| | | ಬಸವಕಲ್ಯಾಣ | | 0.38 | 6 | | | 0.45 | 8 | |
| | | ಔರಾದ | | 0.72 | 10 | | | 0.41 | 7 | |
| | | ಭಾಲ್ಕಿ | 3.86 | 0.39 | 5 | | | 0.71 | 12 | |
| | ಒಟ್ಟು:- | | 3.86 | 3.73 | 58 | | 4.78 | 3.79 | 84 | |
| 6 | ಮಹಿಳಾ ಉದ್ಯೋಗಸ್ಥ ವಸತಿ ನಿಲಯ 2235-02-101-0-50-059 | ಅಸ್ತಾ ಮಹಿಳಾ ವಸತಿ ನಿಲಯ ಬೀದರ | 11.45 | 11.45 | 44 | 0 | 5.78 | 5.76 | 37 | 0 |
| | ಒಟ್ಟು | | 11.54 | 11.54 | 44 | 0 | 5.78 | 5.78 | 37 | 0 |
| 7 | ಸಾಧನ ಪ್ರತಿಭೆ | ಬೀದರ | - | - | - | - | 0.5 | 0.5 | 1 | 0 |
| | ಒಟ್ಟು:- | | - | - | - | - | 0.5 | 0.5 | 1 | 0 |

| ಕ್ರ.ಸಂ. | ಯೋಜನೆ ಹೆಸರು | ಕ್ಷೇತ್ರವಾರು ಹೆಸರು | 2016-17 | | | | 2017-18 | | | |
|---|---|---|---|---|---|---|---|---|---|---|
| | | | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ | ಬಿಡುಗಡೆ | ವೆಚ್ಚ | ಭೌತಿಕ | ಉಳಿಕೆ |
| | ಶಿಶು ಕೇಂದ್ರಿತ ಶಾಲೆಗಳು | ಬೀದರ | 69.29 | 69.29 | 151 | | | 122.04 | 246 | |
| | 2235-02-104-2-06 | ಹುಮನಾಬಾದ | 28.07 | 28.07 | 70 | | | 36.76 | 74 | |
| | | ಬಸವಕಲ್ಯಾಣ | 23.64 | 23.64 | 71 | | | 37.03 | 61 | |
| 8 | | ಔರಾದ | 13.34 | 13.34 | 61 | | | 43.96 | 51 | |
| | | ಭಾಲ್ಕಿ | 0 | 0 | 0 | 0 | 239.79 | 0 | 0 | 0 |
| | ಒಟ್ಟು | | 137.24 | 137.24 | 370 | 0 | 239.79 | 239.79 | 452 | 0 |
| 9 | ಗ್ರಾಮೀಣ ಕಾರ್ಯಕರ್ತರ ಗೌರವಧನ (2235-02-101-0-99) | ಬೀದರ | | 6.55 | 33 | | | 10.96 | | |
| | | ಹುಮನಾಬಾದ | | 7 | 34 | | | 10.33 | | |
| | | ಬಸವಕಲ್ಯಾಣ | | 7.06 | 36 | | | 11.46 | | |
| | | ಔರಾದ | | 6.17 | 33 | | | 11.46 | | |
| | | ಭಾಲ್ಕಿ | 50.76 | 7.1 | 36 | | 63.77 | 6.12 | 11.42 | |
| 10 | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ಬೀದರ | 5.83 | 5.83 | ಕರೆಗಳು | 0.00 | 6.16 | 6.16 | ಕರೆಗಳು | 0.00 |
| | ಒಟ್ಟು | | 5.83 | 5.83 | ಕರೆಗಳು | 0.00 | 6.16 | 6.16 | ಕರೆಗಳು | 0.00 |

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ

| ಕ್ರ.ಸ | ಯೋಜನೆಯ ಹೆಸರು | ವರ್ಷ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ಉಳಿಕೆ |
|---|---|---|---|---|---|
| 1 | ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ | 2016-17 | 132.99 | 132.99 | 58.74 |
| | | 2017-18 | 80,78 | 80,78 | 35.98 |
| 2 | ಮಕ್ಕಳಿಗಾಗಿ ವಿಶೇಷ ಪಾಲನಾ ಕೇಂದ್ರ | 2016-17 | 45.74 | 45.74 | 5.41 |
| | | 2017-18 | 48.01 | 48.01 | 0.71 |

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರ ಅಭಿವೃದ್ಧಿಗಾಗಿ ಬೀದರ್ ಜಿಲ್ಲೆಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.
1. ಉದ್ಯೋಗಿನಿ ಯೋಜನೆ 2. ಕಿರುಸಾಲ ಯೋಜನೆ 3. ಸಮೃದ್ಧಿ ಯೋಜನೆ 4. ಧನಶ್ರೀ ಯೋಜನೆ 5. ಚೇತನ ಯೋಜನೆ 6. ಅಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ 7. ಮಾರುಕಟ್ಟೆ ನೆರವು ಯೋಜನೆ. 8. ಮಹಿಳಾ ತರಬೇತಿ ಯೋಜನೆ.
9. ಬಡ್ಡಿ ಸಹಾಯಧನ ಯೋಜನೆ(ಕೆ.ಎಸ್.ಎಫ್.ಸಿ) 10. ಸವಿರುಚಿ ಸಂಚಾರಿ ಕ್ಯಾಂಟೀನ್ ಯೋಜನೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಎಲ್ಲಾ ಯೋಜನೆಗಳಡಿ ಬೀದರ್ ಜಿಲ್ಲೆಗೆ 2016-17ನೇ ಸಾಲಿನಲ್ಲಿ ನಿಗಮದಿಂದ ಬಿಡುಗಡೆಯಾದ ಅನುದಾನದ ವಿವರ

ವರ್ಷ - 2016-17 (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು | ತಾಲ್ಲೂಕು | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಉಳಿದ ಅನುದಾನ |
|---|---|---|---|---|---|---|
| 1 | ಉದ್ಯೋಗಿನಿ ಯೋಜನೆ | ಬೀದರ | 25.95 | 25.95 | 24.55 | 1.40 |
| | | ಭಾಲ್ಕಿ | 12.70 | 12.70 | 9.06 | 3.84 |
| | | ಬಸವಕಲ್ಯಾಣ | 11.50 | 11.50 | 3.10 | 8.40 |
| | | ಹುಮನಾಬಾದ್ | 12.08 | 12.08 | 6.98 | 5.10 |
| | | ಔರಾದ್ | 12.08 | 12.08 | 5.83 | 6.25 |
| | ಒಟ್ಟು | | 74.30 | 74.30 | 49.51 | 24.79 |
| 2 | ಕಿರುಸಾಲ ಯೋಜನೆ | ಬೀದರ | 6.00 | ಅಯ್ಕೆ ಸಮಿತಿಯಿಂದ ಪ್ರಸ್ತಾವನೆಗಳು ಬಂದಿರುವುದಿಲ್ಲ | | |
| | | ಭಾಲ್ಕಿ | 4.00 | | | |
| | | ಬಸವಕಲ್ಯಾಣ | 4.00 | | | |
| | | ಹುಮನಾಬಾದ್ | 4.00 | | | |
| | | ಔರಾದ್ | 4.00 | | | |
| | ಒಟ್ಟು | | 22.00 | 0.00 | 0.00 | 0.00 |
| 3 | ಸಮೃದ್ಧಿ ಯೋಜನೆ | ಬೀದರ | 6.30 | 1.70 | 1.70 | 0.00 |
| | | ಭಾಲ್ಕಿ | 2.60 | 2.60 | 2.60 | 0.00 |
| | | ಬಸವಕಲ್ಯಾಣ | 2.70 | 0.00 | 0.00 | 0.00 |
| | | ಹುಮನಾಬಾದ್ | 2.60 | 0.00 | 0.00 | 0.00 |
| | | ಔರಾದ್ | 2.50 | 0.80 | 0.80 | 0.00 |
| | ಒಟ್ಟು | | 16.70 | 5.10 | 5.10 | 0.00 |
| 4 | ಧನಶ್ರೀ ಯೋಜನೆ | ಬೀದರ | 4.50 | 4.50 | 4.50 | 0.00 |
| | | ಭಾಲ್ಕಿ | 2.00 | 2.00 | 2.00 | 0.00 |
| | | ಬಸವಕಲ್ಯಾಣ | 2.50 | 2.50 | 2.50 | 0.00 |
| | | ಹುಮನಾಬಾದ್ | 2.00 | 2.00 | 2.00 | 0.00 |
| | | ಔರಾದ್ | 2.50 | 2.50 | 2.50 | 0.00 |
| | ಒಟ್ಟು | | 13.50 | 13.50 | 13.50 | 0.00 |
| 5 | ಚೇತನ ಯೋಜನೆ | ಬೀದರ ಉತ್ತರ | 1.00 | 1.00 | 1.00 | 0.00 |
| | | ಭಾಲ್ಕಿ | 0.80 | 0.80 | 0.80 | 0.00 |
| | | ಬಸವಕಲ್ಯಾಣ | 0.40 | 0.40 | 0.40 | 0.00 |
| | | ಹುಮನಾಬಾದ್ | 1.00 | 1.00 | 1.00 | 0.00 |
| | | ಔರಾದ್ | 0.00 | 0.00 | 0.00 | 0.00 |
| | ಒಟ್ಟು | | 3.20 | 3.20 | 3.20 | 0.00 |
| 6 | ಅಂಗತ್ವ ಅಲ್ಪಸಂಖ್ಯಾತರ ಯೋಜನೆ | ಬೀದರ ಉತ್ತರ | 1.40 | 1.40 | 1.40 | 0.00 |
| | | ಭಾಲ್ಕಿ | 1.00 | 1.00 | 1.00 | 0.00 |
| | | ಬಸವಕಲ್ಯಾಣ | 0.20 | 0.20 | 0.20 | 0.00 |
| | | ಹುಮನಾಬಾದ್ | 0.40 | 0.40 | 0.40 | 0.00 |
| | | ಔರಾದ್ | 1.00 | 1.00 | 1.00 | 0.00 |
| | ಒಟ್ಟು | | 4.00 | 4.00 | 4.00 | 0.00 |

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಎಲ್ಲಾ ಯೋಜನೆಗಳಡಿ ಬೀದರ್ ಜಿಲ್ಲೆಗೆ 2017-18ನೇ ಸಾಲಿನಲ್ಲಿ ನಿಗಮದಿಂದ ಬಿಡುಗಡೆಯಾದ ಅನುದಾನದ ವಿವರ

ವರ್ಷ - 2017-18 (ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಯ ಹೆಸರು | ತಾಲ್ಲೂಕು | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಉಳಿದ ಅನುದಾನ |
|---|---|---|---|---|---|---|
| 1 | ಉದ್ಯೋಗಿನಿ ಯೋಜನೆ | ಬೀದರ | 22.72 | 22.04 | 10.70 | 11.34 |
| | | ಭಾಲ್ಕಿ | 12.89 | 11.02 | 4.20 | 6.82 |
| | | ಬಸವಕಲ್ಯಾಣ | 11.20 | 11.02 | 0.00 | 11.02 |
| | | ಹುಮನಾಬಾದ್ | 19.60 | 18.52 | 7.50 | 11.02 |
| | | ಔರಾದ್ | 9.60 | 11.02 | 0.00 | 11.02 |
| | ಒಟ್ಟು | | 76.01 | 73.82 | 22.40 | 51.22 |
| 2 | ಕಿರುಸಾಲ ಯೋಜನೆ | ಬೀದರ | 8.00 | ಅಯ್ಕೆ ಸಮಿತಿಯಿಂದ ಪ್ರಸ್ತಾವನೆಗಳು ಬಂದಿರುವುದಿಲ್ಲ | | |
| | | ಭಾಲ್ಕಿ | 4.00 | | | |
| | | ಬಸವಕಲ್ಯಾಣ | 4.00 | | | |
| | | ಹುಮನಾಬಾದ್ | 6.00 | | | |
| | | ಔರಾದ್ | 4.00 | | | |
| | ಒಟ್ಟು | | 26.00 | 0.00 | 0.00 | 0.00 |
| 3 | ಸಮೃದ್ಧಿ ಯೋಜನೆ | ಬೀದರ | 4.60 | 0.00 | 0.00 | 0.00 |
| | | ಭಾಲ್ಕಿ | 2.60 | 2.60 | 2.60 | 0.00 |
| | | ಬಸವಕಲ್ಯಾಣ | 2.70 | 0.00 | 0.00 | 0.00 |
| | | ಹುಮನಾಬಾದ್ | 6.60 | 4.00 | 4.00 | 0.00 |
| | | ಔರಾದ್ | 2.50 | 0.00 | 0.00 | 0.00 |
| | ಒಟ್ಟು | | 19.00 | 6.60 | 6.60 | 0.00 |
| 4 | ಧನಶ್ರೀ ಯೋಜನೆ | ಬೀದರ | 4.00 | 4.00 | 4.00 | 0.00 |
| | | ಭಾಲ್ಕಿ | 2.00 | 2.00 | 2.00 | 0.00 |
| | | ಬಸವಕಲ್ಯಾಣ | 2.50 | 2.50 | 2.50 | 0.00 |
| | | ಹುಮನಾಬಾದ್ | 4.00 | 2.00 | 2.00 | 0.00 |
| | | ಔರಾದ್ | 2.50 | 2.50 | 2.50 | 0.00 |
| | ಒಟ್ಟು | | 15.00 | 13.00 | 13.00 | 0.00 |
| 5 | ಚೇತನ ಯೋಜನೆ | ಬೀದರ | 0.50 | 0.50 | 0.50 | 0.00 |
| | | ಭಾಲ್ಕಿ | 0.50 | 1.00 | 1.00 | 0.00 |
| | | ಬಸವಕಲ್ಯಾಣ | 0.50 | 0.50 | 0.50 | 0.00 |
| | | ಹುಮನಾಬಾದ್ | 1.50 | 0.50 | 0.50 | 0.00 |
| | | ಔರಾದ್ | 0.00 | 0.00 | 0.00 | 0.00 |
| | ಒಟ್ಟು | | 3.00 | 2.50 | 2.50 | 0.00 |
| 6 | ಅಂಗತ್ವ ಅಲ್ಪಸಂಖ್ಯಾತರ ಯೋಜನೆ | ಬೀದರ | 3.00 | 4.00 | 4.00 | 0.00 |
| | | ಭಾಲ್ಕಿ | 1.00 | 0.50 | 0.50 | 0.00 |
| | | ಬಸವಕಲ್ಯಾಣ | 1.00 | 1.00 | 1.00 | 0.00 |
| | | ಹುಮನಾಬಾದ್ | 2.50 | 0.50 | 0.50 | 0.00 |
| | | ಔರಾದ್ | 1.50 | 0.50 | 0.50 | 0.00 |
| | | ಒಟ್ಟು | 9.00 | 6.50 | 6.50 | 0.00 |
| | | ಬೀದರ | 2.94 | 2.94 | 2.94 | 0.00 |

| | | | | | | |
|---|---|---|---|---|---|---|
| 7 | ಮಹಿಳಾ ತರಬೇತಿ ಯೋಜನೆ | ಬೀದರ ಉತ್ತರ | 6.67 | 3.71 | 3.71 | 0.00 |
| | | ಭಾಲ್ಕಿ | 1.61 | 0.43 | 0.43 | 0.00 |
| | | ಬಸವಕಲ್ಯಾಣ | 0.93 | 0.47 | 0.47 | 0.00 |
| | | ಹುಮನಾಬಾದ್ | 1.70 | 0.85 | 0.85 | 0.00 |
| | | ಔರಾದ್ | 1.76 | 0.88 | 0.88 | 0.00 |
| | ಒಟ್ಟು | | 12.66 | 6.34 | 6.34 | 0.00 |
| 8 | ಮಾರುಕಟ್ಟೆ ಯೋಜನೆ | ಬೀದರ | 0.99 | 0.99 | 0.99 | 0.00 |
| | | ಭಾಲ್ಕಿ | 0.66 | 0 | 0.00 | 0.00 |
| | | ಬಸವಕಲ್ಯಾಣ | 0 | 0 | 0.00 | 0.00 |
| | | ಹುಮನಾಬಾದ್ | 0.66 | 0.66 | 0.66 | 0.00 |
| | | ಔರಾದ್ | 0 | 0 | 0.00 | 0.00 |
| | ಒಟ್ಟು | | 2.31 | 1.65 | 1.65 | 0.00 |

| | | | | | | |
|---|---|---|---|---|---|---|
| 7 | ರಾಜ್ಯ ಸಂಪನ್ಮೂಲ ಯೋಜನೆಯಡಿ ಸಿಬ್ಬಂದಿಗಳ ಗೌರವಧನ | ಭಾಲ್ಕಿ | 0.00 | 0.00 | 0.00 | 0.00 |
| | | ಬಸವಕಲ್ಯಾಣ | 0.00 | 0.00 | 0.00 | 0.00 |
| | | ಹುಮನಾಬಾದ್ | 0.00 | 0.00 | 0.00 | 0.00 |
| | | ಔರಾದ್ | 0.00 | 0.00 | 0.00 | 0.00 |
| | | ಒಟ್ಟು | 2.94 | 2.94 | 2.94 | 0.00 |
| 8 | ಮಹಿಳಾ ತರಬೇತಿ ಯೋಜನೆ | ಬೀದರ | 1.86 | ಕೌಶಲ್‌ಕಾರ್ ಡಾಟ್ ಕಾಂ ಇವರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. | | |
| | | ಭಾಲ್ಕಿ | 1.86 | | | |
| | | ಬಸವಕಲ್ಯಾಣ | 1.86 | | | |
| | | ಹುಮನಾಬಾದ್ | 1.86 | | | |
| | | ಔರಾದ್ | 1.86 | | | |
| | ಒಟ್ಟು | | 9.30 | | | |
| 9 | ಸವಿರುಚಿ ಸಂಚಾರಿ ಕ್ಯಾಂಟೀನ್ ಯೋಜನೆ | ಬೀದರ್ ಜಿಲ್ಲೆ | 10.00 | 10.00 | 10.00 | 0.00 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಘುನಾಥರಾವ್ ಮಲ್ಕಾಪೂರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:527ಕ್ಕೆ ಅನುಬಂಧ-2.**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

ಇಲಾಖೆಯಡಿ ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿರುವುದಿಲ್ಲ.

**ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ**

ಬೀದರ್ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಅನುಬಂಧ-1ರಲ್ಲಿ ವಿವರಿಸಿರುವ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ, ಈ ವರ್ಷವೂ ಸಹ ಅನುಷ್ಠಾನಗೊಳಿಸಲಾಗುವುದು.

**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**

- ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಿನಿ, ಕಿರುಸಾಲ, ಸಮೃದ್ಧಿ ಯೋಜನೆಗಳಡಿ ವಿಧಾನಸಭಾ ಕ್ಷೇತ್ರವಾರು ಗುರಿ ನಿಗದಿಪಡಿಸಿ, ನಿಯಮಾನುಸಾರ ಅನುಷ್ಠಾನಗೊಳಿಸಲಾಗುತ್ತಿದೆ. ಚೇತನ, ಧನಶ್ರೀ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಯೋಜನೆಗಳಲ್ಲಿ ಜಿಲ್ಲಾವಾರು ಗುರಿ ನಿಗದಿಪಡಿಸಿ, ನಿಯಮಾನುಸಾರ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಲ್ಲಿ ಗ್ರಾಮೀಣ ಮಹಿಳೆಯರು ಕೂಡ ಭಾಗವಹಿಸಬಹುದಾಗಿದೆ.

- **ಉದ್ಯೋಗಿನಿ ಯೋಜನೆ:** ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕುಗಳ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.50 ರಷ್ಟು ಗರಿಷ್ಟ ರೂ.1,50,000/-. ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.2.00 ಲಕ್ಷಗಳು. ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.30 ರಷ್ಟು ಗರಿಷ್ಟ ರೂ.90,000/-. ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.1.50 ಲಕ್ಷಗಳು. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು.

- **ಕಿರುಸಾಲ ಯೋಜನೆ:** ಸ್ತ್ರೀಶಕ್ತಿ ಸ್ವ ಸಹಾಯ ಗುಂಪಿನ ಸದಸ್ಯರುಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರತಿ ಗುಂಪಿಗೆ ಬಡ್ಡಿರಹಿತವಾಗಿ ರೂ.1.00 ಲಕ್ಷದಿಂದ ರೂ.2.00 ಲಕ್ಷಗಳವರೆಗೆ ಸಾಲವನ್ನು ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ನೀಡಲಾಗುತ್ತಿದೆ.

- **ಸಮೃದ್ಧಿ ಯೋಜನೆ:** 2016-17ನೇ ಸಾಲಿನಿಂದ ಬೀದಿಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ 18 ರಿಂದ 60 ವಯೋಮಾನದ ಮಹಿಳೆಯರಿಗೆ ತಲಾ ರೂ.10,000/- ಗಳಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

➢ **ಧನಶ್ರೀ ಯೋಜನೆ:** 2016-17ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18 ರಿಂದ 60 ವಯೋಮಿತಿಯ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ತಲಾ ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನವನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

➢ **ಚೇತನ ಯೋಜನೆ:** ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ತಲಾ ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನವನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

➢ **ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:** ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ 2012-13ನೇ ಸಾಲಿನಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅವರನ್ನು ಸಬಲೀಕರಣಗೊಳಿಸಲು ನಿಗಮದಿಂದ ನೇರವಾಗಿ ತಲಾ ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನವನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

➢ **ಮಾರುಕಟ್ಟೆ ನೆರವು ಯೋಜನೆ:** ಮಹಿಳಾ ಉದ್ದಿಮೆದಾರರನ್ನು ಉತ್ತೇಜಿಸುವ ಸಲುವಾಗಿ ಹಾಗೂ ಮಹಿಳಾ ಸ್ವ ಸಹಾಯ ಸಂಘಗಳು ತಯಾರಿಸಿ ಉತ್ಪನ್ನಗಳನ್ನು ಮಾರಾಟ ಮಾಡಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಸ್ತುಪ್ರದರ್ಶನ ಏರ್ಪಡಿಸಲಾಗುವುದು.

➢ **ಮಹಿಳಾ ತರಬೇತಿ ಯೋಜನೆ:** ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಮತ್ತು ವಿಶೇಷ ವರ್ಗದವರಿಗೆ ಹಾಗೂ ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದ ಮಹಿಳೆಯರುಗೆ ಕೌಶಲ್ಯ ತರಬೇತಿ ನೀಡಿ, ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ಹಾಗೂ ಈ ತರಬೇತಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಾರ್ಗಸೂಚಿಯಂತೆ ನಡೆಸಲಾಗುತ್ತಿದೆ.

➢ **ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ (ಕೆ.ಎಸ್.ಎಫ್.ಸಿ. ಮೂಲಕ):** ಸಣ್ಣ/ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಂಜೂರಾಗುವ ಕನಿಷ್ಠ ರೂ.5.00 ಲಕ್ಷಗಳಿಂದ ರೂ.200.00 ಲಕ್ಷಗಳವರೆಗಿನ ಸಾಲದ ಮೊತ್ತಕ್ಕೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ.10 ರ ಬಡ್ಡಿ ಸಹಾಯಧನ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವಿಧಿಸುವ ಸಾಮಾನ್ಯ ಬಡ್ಡಿದರ ಶೇ.10 ರ ವ್ಯತ್ಯಾಸ ಮೊತ್ತವನ್ನು ಸಾಲ ಮಂಜೂರಾದ ಅವಧಿಯಿಂದ ಮುಂದಿನ 5 ವರ್ಷಗಳವರೆಗೆ ಮಹಿಳಾ ಉದ್ದಿಮೆದಾರರಿಗೆ ಕೆ.ಎಸ್.ಎಫ್.ಸಿ. ಮೂಲಕ ಮರುಪಾವತಿಸಲಾಗುತ್ತಿದೆ.

➢ **ಸವಿರುಚಿ ಸಂಚಾರಿ ಕ್ಯಾಂಟೀನ್ ಯೋಜನೆ:**ಸ್ತ್ರೀಶಕ್ತಿ ಸದಸ್ಯರಲ್ಲಿ ಉದ್ಯಮಶೀಲತೆ ಮನೋಭಾವ ಬೆಳೆಸುವ ಉದ್ದೇಶದಿಂದ 2017-18ನೇ ಸಾಲಿನಲ್ಲಿ ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟದ ಮೂಲಕ ಸವಿರುಚಿ ಸಂಚಾರಿ ಕ್ಯಾಂಟೀನ್‌ನ್ನು ಜಿಲ್ಲಾದ್ಯಾಂತ ನಡೆಸಲು ನಿಗಮದ ಮೂಲಕ ರೂ.10.00 ಲಕ್ಷಗಳ ಬಡ್ಡಿರಹಿತ ಸಾಲವನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮೂಲಕ ಒದಗಿಸಲಾಗಿರುತ್ತದೆ. ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟದಿಂದ ಸವಿರುಚಿ ಸಂಚಾರಿ ಕ್ಯಾಂಟೀನ್‌ನ್ನು ನಡೆಸಲಾಗುತ್ತಿದೆ. ಈ ಸಾಲವನ್ನು 6 ತಿಂಗಳ ವಿರಾಮ ಅವಧಿಯ ನಂತರ 67 ಕಂತುಗಳಲ್ಲಿ ಬಡ್ಡಿರಹಿತವಾಗಿ ಮರುಪಾವತಿಸಬೇಕಿರುತ್ತದೆ.

➢ **ಮಹಿಳೆಯರಿಗೆ ಬಡ್ಡಿ ಸಹಾಯಧನ ಯೋಜನೆ:** 2018-19ನೇ ಸಾಲಿನ ಆಯವ್ಯಯ ಘೋಷಣೆಯಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಕಿಯರಿಗೆ ದ್ವಿ-ಚಕ್ರ ವಾಹನ

ಖರೀದಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ರೂ.50,000/- ಗಳ ಬಡ್ಡಿರಹಿತ ಸಾಲವನ್ನು ನೀಡಲಾಗ್ತುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪ್ರತಿ ಮಾಹೆ ರೂ.1,000/- ಗಳನ್ನು ಇಂಧನ ವೆಚ್ಚವಾಗಿ ನೀಡಲಾಗುತ್ತಿದೆ.

## ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಯಾವುದೇ ಯೋಜನೆಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿರುವುದಿಲ್ಲ. ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- **ಸಮಗ್ರ ಮಕ್ಕಳ ರಕ್ಷಣಾ ಯೋಜನೆ :**
  - ಅ.) ಬಾಲಮಂದಿರಗಳು
  - ಆ). ವೀಕ್ಷಣಾಲಯಗಳು
  - ಇ). ಅರ್ಹಸಂಸ್ಥೆ
  - ಈ) ತೆರೆದ ತಂಗುದಾಣಗಳು
  - ಉ) ವಿಶೇಷ ದತ್ತು ಕೇಂದ್ರ
  - ಊ) ಪ್ರಾಯೋಜಕತ್ವ ಕಾರ್ಯಕ್ರಮ

- **ವಿಶೇಷ ಪಾಲನಾ ಯೋಜನೆ :** ಮಕ್ಕಳ ರಕ್ಷಣೆ ಹಾಗು ಪೋಷಣೆಗಾಗಿ ಸರ್ಕಾರವು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.

- **ಅ) ಸಮಗ್ರ ಮಕ್ಕಳ ರಕ್ಷಣಾ ಯೋಜನೆ :** ಈ ಯೋಜನೆಯಡಿ, ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯ್ದೆಯ ಅನ್ವಯ ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಪುನರ್‌ವಸತಿ ಕಲ್ಪಿಸಲು ಪ್ರತಿ ಜಿಲ್ಲೆಯಲ್ಲಿ 'ಮಕ್ಕಳ ಕಲ್ಯಾಣ ಸಮಿತಿ' ಗಳನ್ನು ಸ್ಥಾಪಿಸಲಾಗಿದೆ. ಈ ಸಮಿತಿಯ ಮುಂದೆ ಹಾಜರಾದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗಾಗಿ 59 **ಬಾಲಮಂದಿರಗಳನ್ನು** ಸ್ಥಾಪಿಸಲಾಗಿದೆ. (ಬಾಲಕರಿಗಾಗಿ – 29 , ಬಾಲಕಿಯರಿಗಾಗಿ–29 ಹಾಗೂ 6 ವರ್ಷದೊಳಗಿನ ಮಕ್ಕಳಿಗಾಗಿ ಒಂದು 'ಶಿಶುಮಂದಿರ' ವನ್ನು ಸ್ಥಾಪಿಸಲಾಗಿದೆ.) ಈ ಬಾಲಮಂದಿರಗಳಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ದಿಗಾಗಿ ಅವಶ್ಯವಿರುವ ಎಲ್ಲಾ ಸೇವೆಗಳನ್ನು (ರಕ್ಷಣೆ, ಪೋಷಣೆ , ವಸತಿ,ಆಹಾರ, ಶಿಕ್ಷಣ, ವೈದ್ಯಕೀಯ, ಸಮಾಲೋಚನೆ, ಮನೋರಂಜನೆ ಹಾಗೂ ಇತರೆ ಸೌಲಭ್ಯಗಳನ್ನು) ಉಚಿತವಾಗಿ ನೀಡಲಾಗುತ್ತಿದೆ.
- ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ 17 **ವೀಕ್ಷಣಾಲಯಗಳನ್ನು** ನಡೆಸಲಾಗುತ್ತಿದೆ.

- ಸರ್ಕಾರವು ಸ್ವಯಂ ಸೇವಾ ಸಂಸ್ಥೆಗಳನ್ನು ಬಾಲನ್ಯಾಯ ಕಾಯ್ದೆಯಡಿ ನೋಂದಣಿ ಮಾಡಿಕೊಂಡು **ಅರ್ಹ ಸಂಸ್ಥೆ**ಯೆಂದು ಮಾನ್ಯತೆ ನೀಡುತ್ತಿದೆ. ಅಂತಹ ಸಂಸ್ಥೆಗಳಿಗೆ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ದಾಖಲಿಸಲಾಗುವುದು. ಇಂತಹ 8 ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

- ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಪಾಲನೆ ಮತ್ತು ಪೋಷಣೆ ಅಗತ್ಯವಿರುವ (ಚಿಂದಿ ಆಯುವ ಮಕ್ಕಳು, ಬೀದಿ ಮಕ್ಕಳು, ಕೆಲಸ ಮಾಡುವ ಮಕ್ಕಳು, ಅನಾಥ ಮಕ್ಕಳು, ಸಾಗಾಣೆಯಾದ ಮಕ್ಕಳು, ಪರಿತ್ಯಜಿಸಲ್ಪಟ್ಟ ಮಕ್ಕಳು, ಶೋಷಣೆ, ದೌರ್ಜನ್ಯಕ್ಕೆ ಒಳಗಾದ ಬೀದಿ ಮಕ್ಕಳು ಹಾಗೂ ವಲಸೆ ಬಂದವರ ಮಕ್ಕಳು ಮತ್ತು ರಸ್ತೆ ಬದಿಯಲ್ಲಿ ವಾಸಿಸುವರ ಮಕ್ಕಳು) ಮಕ್ಕಳಿಗಾಗಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 39 **ತೆರೆದ ತಂಗುದಾಣಗಳು** ಕಾರ್ಯ ನಿರ್ವಹಿಸುತ್ತಿವೆ.

- ಅನಾಥ, ನಿರ್ಗತಿಕ ಹಾಗು ತ್ಯಜಿಸಲ್ಪಟ್ಟ ಮಕ್ಕಳ ಪುನರ್ವಸತಿಗಾಗಿ ಕಾನೂನುಬದ್ಧವಾದ ದತ್ತು ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಬಾಲನ್ಯಾಯ ಕಾಯ್ದೆಯಡಿ ದತ್ತು ಪ್ರಕ್ರಿಯೆಯನ್ನು ನಡೆಸಲು ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ **"ವಿಶೇಷ ದತ್ತು ಕೇಂದ್ರ"** ವೆಂದು ಪರವಾನಿಗೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 33 ವಿಶೇಷ ದತ್ತು ಕೇಂದ್ರಗಳನ್ನು ನಡೆಸಲು ಪರವಾನಿಗೆ ನೀಡಲಾಗಿದ್ದು, ಅವುಗಳಲ್ಲಿ 6 ಘಟಕಗಳು ಸರ್ಕಾರದಿಂದ ನಡೆಸಲ್ಪಡುತ್ತಿವೆ.

- **ಪ್ರಾಯೋಜಕತ್ವ** ಕಾರ್ಯಕ್ರಮದಡಿ ಮಕ್ಕಳನ್ನು (18 ವರ್ಷದೊಳಗಿನ) ಕುಟುಂಬ ವಾತಾವರಣದಲ್ಲಿ ಬೆಳೆಸಲು,ಶಿಕ್ಷಣ,ಪೋಷಣೆ ಹಾಗೂ ಆರೋಗ್ಯ ಪರಿಕರಗಳಿಗಾಗಿ ಮಾಹೆಯಾನ ರೂ.1000/- ಆರ್ಥಿಕ ಸಹಾಯವನ್ನು ಪ್ರತಿ ಮಗುವಿಗೆ ಗರಿಷ್ಠ 3 ವರ್ಷಗಳ ಅವಧಿಗೆ ನೀಡಲಾಗುತ್ತಿದೆ.

- **ವಿಶೇಷ ಪಾಲನಾ ಯೋಜನೆ (ಹೆಚ್.ಐ.ವಿ.ಸೋಂಕಿತ/ಬಾಧಿತ ಮಕ್ಕಳಗಾಗಿ ವಿಶೇಷ ಪಾಲನಾ ಯೋಜನೆ)** : ಈ ಯೋಜನೆಯಡಿಯಲ್ಲಿ ಎ.ಆರ್.ಟಿ. ಕೇಂದ್ರಗಳಲ್ಲಿ ನೋಂದಾಯಿತ ಕುಟುಂಬದ ಹೆಚ್.ಐ.ವಿ.ಸೋಂಕಿತ / ಬಾಧಿತ ಮಕ್ಕಳಿಗೆ ಮಾಸಿಕ ರೂ.1000/- ದಂತೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.

************